ಕರ್ನಾಟಕ ಪಶುವೈದ್ಯಕೀಯ ಹಾಗೂ ಮೀನುಗಾರಿಕೆ, ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್

# ಕೃಷಿ ವಿಜ್ಞಾನ ಕೇಂದ್ರ (ದ.ಕ.)

ಕಂಕನಾಡಿ, ಮಂಗಳೂರು- 575 002☎: 0824: 2431872

ಪತ್ರಿಕಾ ಪ್ರಕಟಣೆ

## ಕೃಷಿ ಪರಿಕರ ಮಾರಾಟಗಾರರ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೊಮಾ ತರಬೇತಿ ಕಾರ್ಯಕ್ರಮ

ದಿನಾಂಕ 07.03.2020 ರಂದು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ, ಭಾ.ಕೃ.ಅ.ಪ- ಕೃಷಿ ವಿಜ್ಞಾನ ಕೇಂದ್ರ, ಕಂಕನಾಡಿ, ಸಮೇತಿ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ರಾಷ್ಟ್ರೀಯ ಕೃಷಿ ವಿಸ್ತರಣಾ ನಿರ್ವಹಣಾ ಸಂಸ್ಥೆ, ಹೈದರಾಬಾದ್ ಇವರ ಸಂಯುಕ್ತಾಶ್ರಯದಲ್ಲಿ ಕೃಷಿ ಪರಿಕರ ಮಾರಾಟಗಾರರ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೊಮಾ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ನಿರೂಪಣೆಯನ್ನು ಡಾ.ಕೇದಾರನಾಥ್ ವಿಜ್ಞಾನಿ (ಸಸ್ಯ ಸಂರಕ್ಷಣೆ) ಮತ್ತು ಸಂಚಾಲಕರು ದೇಸಿ, ಭಾ.ಕೃ.ಅ.ಪ- ಕೆ.ವಿ.ಕೆ ಮಂಗಳೂರು ಇವರು ನೆರವೇರಿಸಿಕೊಟ್ಟರು.

ಭಾ.ಕೃ.ಅ.ಪ- ಕೆ.ವಿ.ಕೆ ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರಾದ ಡಾ.ಟಿ.ಜಿ.ರಮೇಶ ರವರು ದೇಸಿ ಡಿಪ್ಲೊಮಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು ಹಾಗೂ ಪರಿಕರ ಮಾರಾಟಗಾರರನ್ನು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಯಲ್ಲಿ ಪ್ರಸ್ತುತ ಕೃಷಿ ಪರಿಸ್ಥಿತಿ, ಕೃಷಿ ಪರಿಕರ ಮಾರಾಟಗಾರರ ಕಾರ್ಯ ವೈಖರಿಗಳು, ದೇಸಿ ಕಾರ್ಯಕ್ರಮದ ದೆಯೋದ್ದೇಶಗಳು ಅಲ್ಲದೆ ಕೃಷಿ ಪರಿಕರ ಮಾರಾಟಗಾರರು ತಮ್ಮ ಸಂಸ್ಥೆಯ ವಿಜ್ಞಾನಿಗಳಿಂದ ಸಂಪೂರ್ಣ ವೈಜ್ಞಾನಿಕ ಮಾಹಿತಿಯನ್ನು ಪಡೆದು ಕೃಷಿಕ ಸಮುದಾಯಕ್ಕೆ ಪ್ರಯೋಜನವಾಗುವ ರೀತಿಯಲ್ಲಿ ಕಾರ್ಯ ಮಾಡಬೇಕಾಗಿ ಕರೆ ನೀಡಿದರು.

ಈ ತರಬೇತಿ ಕಾರ್ಯಕ್ರಮದ ಅಂಗವಾಗಿ ಡಾ. ಸೆಲ್ವಮಣಿ. ಆರ್., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿಯಲ್ಲಿ ಬಳಸಬಹುದಾದ ಕೀಟನಾಶಕಗಳ ಬಗ್ಗೆ ಮಾಹಿತಿ ನೀಡಿದರು. ಕೀಟನಾಶಕಗಳನ್ನು ಮಾರುವಾಗ ರೈತರಿಗೆ ನೀಡಬೇಕಾದ ಸವಿವರ ಮಾಹಿತಿ ಬಗ್ಗೆ ವಿವರಿಸಿ ಹೇಳಬೇಕು ಹಾಗೂ ಕೀಟನಾಶಕಗಳ ಪ್ರಯೋಜನಗಳು ಹಾಗೂ ದುರುಪಯೋಗದ ಕುರಿತು ಅರಿವು ಮೂಡಿಸಲು ಪರಿಕರ ಮಾರಾಟಗಾರರು ಕ್ರಮಕೈಗೊಳ್ಳಬೇಕೆಂದು ಹೇಳಿದರು.

ನಂತರ ಮಧ್ಯಾಹ್ನ ಡಾ.ಕೆ. ವೆಂಕಟರಂಗ ನಾಯಕ ಪ್ರಾಧ್ಯಾಪಕರು ಕೃಷಿ ವಿಸ್ತರಣೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಇವರು ಕೃಷಿ ವಿಸ್ತರಣೆಯಲ್ಲಿನ ಸುಧಾರಣೆಗಳು, ಪರಿಕರ ಮಾರಾಟಗಾರರ ಪಾತ್ರ ಹಾಗೂ ಕೆಲವು ಚಿಂತನೆ ಇದರ ಬಗ್ಗೆ ಸವಿವರ ಮಾಹಿತಿಯನ್ನು ನೀಡಿದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಶ್ರೀಮತಿ ವಿಜೇತ, ದೇಸಿ ಅನುವುಗಾರರು ಇವರು ವಂದನಾರ್ಪಣೆ ಮೂಲಕ ವಂದಿಸಿದರು.

ಸಹಿ

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥgÀÄ

# ಕೃಷಿ ಪರಿಕರ ಮಾರಾಟಗಾರರ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೊಮಾ ತರಬೇತಿ ಕಾರ್ಯಕ್ರಮ

ದಿನಾಂಕ 29.02.2020 ರಂದು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ, ಭಾ.ಕೃ.ಅ. ಪ-ಕೃಷಿ ವಿಜ್ಞಾನ ಕೇಂದ್ರ , ಕಂಕನಾಡಿ, ಸಮೇತಿ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ರಾಷ್ಟ್ರೀಯ ಕೃಷಿ ವಿಸ್ತರಣಾ ನಿರ್ವಹಣಾ ಸಂಸ್ಥೆ, ಹೈದರಾಬಾದ್ ಇವರ ಸಂಯುಕ್ತಾಶ್ರಯದಲ್ಲಿ ೨೫ನೇ ವಾರದ ತರಗತಿಯನ್ನು ಮತ್ತು ಕೃಷಿ ಪರಿಕರ ಮಾರಾಟಗಾರರಿಗೆ ಹಮ್ಮಿಕೊಳ್ಳಲಾಗಿತ್ತು.

ಈ ತರಬೇತಿ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆರೂರು ಮಂಜುನಾಥ ರಾವ್ ಹಾಗೂ ಡಾ. ರಶ್ಮಿ. ಆರ್. ವಿಜ್ಞಾನಿ ( ತೋಟಗಾರಿಕೆ), ಇವರು ಭಾಗವಹಿಸಿದ್ದರು.

ಶ್ರೀ.ಆರೂರು ಮಂಜುನಾಥ ರಾವ್ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ನಮ್ಮ ಆಹಾರ ನಮಗೆ ಔಷಧ, ನಮ್ಮ ಪರಿಸರದಲ್ಲಿ ಲಭ್ಯವಿರುವ ಆಹಾರ ವಸ್ತುಗಳು ಎಲ್ಲಾ ಜೀವಿಗಳ ಆಹಾರ ಮತ್ತು ಆರೋಗ್ಯದ ಮೂಲ ಎನ್ನುವುದನ್ನು ಇತರೆ ಜೀವಿಗಳು ನಮಗೆ ಪ್ರತಿಕ್ಷಣವೂ ಮನದಟ್ಟು ಮಾಡುತ್ತಿವೆ. ಆದರೆ ಎಲ್ಲಾ ಜೀವಿಗಳಿಗಿಂತ ಬುದ್ದಿವಂತ ಎನಿಸಿಕೊಂಡ ಮಾನವನು ತನ್ನ ಆರೋಗ್ಯದ ವಿಷಯದಲ್ಲಿ ಎಡವಿರುವುದು ಕಂಡುಬರುತ್ತದೆ. ನಾವು ಸೇವಿಸುವ ಆಹಾರವೇ ಔಷಧಿಯ ಆಗರವಾಗಿದ್ದು ಆರೋಗ್ಯದ ಮೂಲವಾಗಿದೆ. ಸಸ್ಯಾಹಾರಕ್ಕೆ ಅನುಗುಣವಾದ ದೇಹಸ್ಥಿತಿಯನ್ನು ಹೊಂದಿರುವ ಮನುಷ್ಯನಿಗೆ ನಮ್ಮ ಪರಿಸರದ ಸಸ್ಯಗಳೇ ಆಹಾರ ಮತ್ತು ಔಷಧ. ನಮ್ಮ ಮನೆಯ ಸುತ್ತಮುತ್ತ ಹಾಗೂ ಹಿತ್ತಲಿನ ಪರಿಸರದಲ್ಲಿ ಬೆಳೆಯುವ ಮತ್ತು ಬೆಳೆಸಿಕೊಳ್ಳಬಹುದಾದ ಹಲವಾರು ವಿಧದ ಔಷಧಿ ಸಸ್ಯಗಳನ್ನು ನಮ್ಮ ನಿತ್ಯ ಆಹಾರದಲ್ಲಿ ಬಳಸಿ ನಮ್ಮ ಶರೀರದ ಆರೋಗ್ಯ ನಿರ್ವಹಣೆಯನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವಿದೆ ಎಂದುಹೇಳಿದರು.

ನಂತರ ಮಧ್ಯಾಹ್ನದ ತರಗತಿಯನ್ನು ಡಾ. ರಶ್ಮಿ. ಆರ್. ವಿಜ್ಞಾನಿ ( ತೋಟಗಾರಿಕೆ), ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಶುಂಠಿ ಹಾಗೂ ಅರಶಿನದ ಬೇಸಾಯದ ಬಗ್ಗೆ ಸಮಗ್ರ ಮಾಹಿತಿ ನೀಡಿದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು, ಪರಿಕರ ಮಾರಾಟಗಾರರು, ವಿಜ್ಞಾನಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಶ್ರೀಮತಿ ವಿಜೇತ, ದೇಸಿ ಅನುವುಗಾರರು ಇವರು ವಂದನಾರ್ಪಣೆ ಮೂಲಕ ವಂದಿಸಿದರು.

# ಕೃಷಿ ಪರಿಕರ ಮಾರಾಟಗಾರರ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೊಮಾ ತರಬೇತಿ ಕಾರ್ಯಕ್ರಮ

ದಿನಾಂಕ 15.02.2020 ರಂದು ಕರ್ನಾಟಕ ಪಶು ವೈದ್ಯಕೀಯ,ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ,ಭಾ.ಕೃ.ಅ.ಪ- ಕೃಷಿ ವಿಜ್ಞಾನ ಕೇಂದ್ರ, ಕಂಕನಾಡಿ, ಸಮೇತಿ, ಕೃಷಿ ವಿಶ್ವವಿದ್ಯಾನಿಲಯ ,ಬೆಂಗಳೂರು ಮತ್ತು ರಾಷ್ಟ್ರೀಯ ಕೃಷಿ ವಿಸ್ತರಣಾ ನಿರ್ವಹಣಾ ಸಂಸ್ಥೆ, ಹೈದರಾಬಾದ್ ಇವರ ಸಂಯುಕ್ತಾಶ್ರಯದಲ್ಲಿ ೨೩ನೇ ವಾರದ ತರಗತಿಯನ್ನು ಮತ್ತು ಕೃಷಿ ಪರಿಕರ ಮಾರಾಟಗಾರರಿಗೆ ಹಮ್ಮಿಕೊಳ್ಳಲಾಗಿತ್ತು.

ಈ ತರಬೇತಿ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಡಾ.ರಶ್ಮಿ.ಆರ್. ವಿಜ್ಞಾನಿ (ತೋಟಗಾರಿಕೆ), ಹಾಗೂ ಶ್ರೀ. ರಾಧಾಕೃಷ್ಣ ಆರ್. ಪ್ರಗತಿಪರ ಜೇನು ಕೃಷಿಕರು ಭಾಗವಹಿಸಿದ್ದರು.

ಡಾ.ರಶ್ಮಿ.ಆರ್. ವಿಜ್ಞಾನಿ (ತೋಟಗಾರಿಕೆ), ಇವರು ಮಾವಿನ ವಿವಿಧ ತಳಿಗಳು, ಸುಧಾರಿತ ತಂತ್ರಜ್ಞಾನಗಳು, ಕೀಟ ಹಾಗೂ ರೋಗವನ್ನು ನಿಯಂತ್ರಿಸುವ ಕ್ರಮಗಳ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡಿದರು.

ನಂತರ ಮಧ್ಯಾಹ್ನದ ತರಗತಿಯನ್ನು ಶ್ರೀ. ರಾಧಾಕೃಷ್ಣ ಆರ್. ಪ್ರಗತಿಪರ ಜೇನು ಕೃಷಿಕರು ಇವರು ಜೇನು ಕೃಷಿ ಮಾಡುವ ವಿಧಾನ, ವಿವಿಧ ತಳಿಯ ಜೇನು, ಜೇನಿನ ಜೀವನ ಚಕ್ರದ ಬಗ್ಗೆ, ಜೇನು ಕುಟುಂಬಕ್ಕೆ ತಗಲುವ ರೋಗದ ಬಗ್ಗೆ ಮತ್ತು ಜೇನು ಸಾಕಾಣಿಕೆ ಕೈಗೊಳ್ಳುವುದರಿಂದ ಬೆಳೆಯ ಉತ್ಪಾದನೆಯಲ್ಲಿ ಹೆಚ್ಚುವರಿ ಆದಾಯವನ್ನು ಗಳಿಸಬಹುದು ಎಂಬುದರ ಬಗ್ಗೆ ಮಾಹಿತಿ ನೀಡಿದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು, ಪರಿಕರ ಮಾರಾಟಗಾರರು, ವಿಜ್ಞಾನಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಶ್ರೀಮತಿ ವಿಜೇತ, ದೇಸಿ ಅನುವುಗಾರರು ಇವರು ವಂದನಾರ್ಪಣೆ ಮೂಲಕ ವಂದಿಸಿದರು.

# ಕೃಷಿ ಪರಿಕರ ಮಾರಾಟಗಾರರ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೊಮಾ ತರಬೇತಿ ಕಾರ್ಯಕ್ರಮ

ದಿನಾಂಕ 01.02.2020 ರಂದು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ, ಭಾ.ಕೃ.ಅ.ಪ- ಕೃಷಿ ವಿಜ್ಞಾನ ಕೇಂದ್ರ, ಕಂಕನಾಡಿ, ಸಮೇತಿ, ಕೃಷಿವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ರಾಷ್ಟ್ರೀಯ ಕೃಷಿವಿಸ್ತರಣಾ ನಿರ್ವಹಣಾ ಸಂಸ್ಥೆ, ಹೈದರಾಬಾದ್ ಇವರ ಸಂಯುಕ್ತಾಶ್ರಯದಲ್ಲಿ ೨೨ನೇ ವಾರದ ತರಗತಿಯನ್ನು ಮತ್ತು ಕೃಷಿ ಪರಿಕರ ಮಾರಾಟಗಾರರಿಗೆ ಹಮ್ಮಿಕೊಳ್ಳಲಾಗಿತ್ತು.

ಈ ತರಬೇತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ. ಕರ್ನಲ್ ಶರತ್ ಭಂಡಾರಿ, ನಿವೃತ್ತ ಭಾರತೀಯ ಯೋಧ ಹಾಗೂ ಡಾ. ರಶ್ಮಿ.ಆರ್ ವಿಜ್ಞಾನಿಗಳು(ತೋಟಗಾರಿಕೆ) ಇವರು ಭಾಗವಹಿಸಿದ್ದರು.

ಕರ್ನಲ್ ಶರತ್ ಭಂಡಾರಿ, ನಿವೃತ್ತ ಭಾರತೀಯ ಯೋಧ ಇವರು ಕೃಷಿಯಲ್ಲಿ ಮಾನವ ಮತ್ತು ಪ್ರಾಣಿಗಳ ಸಂಘರ್ಷ ಮತ್ತು ಅದನ್ನು ಹೇಗೆ ನಿವಾರಿಸುವುದು, ಅವುಗಳಿಂದ ಉಂಟಾಗುವ ಅಪಾಯದ ಬಗ್ಗೆ ಮಾಹಿತಿಯನ್ನು ನೀಡಿದರು.

ನಂತರ ಮಧ್ಯಾಹ್ನದ ತರಗತಿಯನ್ನು ಡಾ.ರಶ್ಮಿ. ಆರ್ ವಿಜ್ಞಾನಿಗಳು (ತೋಟಗಾರಿಕೆ), ಇವರು ಅಪೌಷ್ಟಿಕತೆ ನಿವಾರಣೆಗೆ ಕೈತೋಟದ ಪ್ರಾಮುಖ್ಯತೆ, ಕೈತೋಟ ಮಾಡುವ ವಿಧಾನಗಳು ಅಲ್ಲದೇ ಬೆಳೆಸಬಹುದಾದ ವಿವಿಧ ಬೆಳೆಗಳು, ಕೈತೋಟಕ್ಕೆ ತಗಲುವ ರೋಗ ಮತ್ತು ಕೀಟಗಳು,ಸಮಗ್ರ ಪೀಡೆ ನಿರ್ವಹಣೆ, ಸಂಸ್ಕರಣಾ ವಿಧಾನಗಳು, ಮಾರುಕಟ್ಟೆ ವ್ಯವಸ್ಥೆ ಹಾಗೂ ತೋಟಗಾರಿಕೆ ಇಲಾಖೆ ವತಿಯಿಂದ ದೊರಕುವ ಸವಲತ್ತುಗಳ ಕುರಿತು ಸಮಗ್ರ ಮಾಹಿತಿ ನೀಡಿದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು,ಪರಿಕರ ಮಾರಾಟಗಾರರು,ವಿಜ್ಞಾನಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಶ್ರೀಮತಿ ವಿಜೇತ, ದೇಸಿ ಅನುವುಗಾರರು ಇವರು ವಂದನಾರ್ಪಣೆ ಮೂಲಕ ವಂದಿಸಿದರು.

# ಕೃಷಿ ಪರಿಕರ ಮಾರಾಟಗಾರರ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೊಮಾ ತರಬೇತಿ ಕಾರ್ಯಕ್ರಮ

ದಿನಾಂಕ 25.01.2020 ರಂದು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ,ಭಾ.ಕೃ.ಅ.ಪ-ಕೃಷಿ ವಿಜ್ಞಾನ ಕೇಂದ್ರ, ಕಂಕನಾಡಿ,ಸಮೇತಿ,ಕೃಷಿ ವಿಶ್ವವಿದ್ಯಾನಿಲಯ,ಬೆಂಗಳೂರು ಮತ್ತು ರಾಷ್ಟ್ರೀಯ ಕೃಷಿ ವಿಸ್ತರಣಾ ನಿರ್ವಹಣಾ ಸಂಸ್ಥೆ, ಹೈದರಾಬಾದ್ ಇವರ ಸಂಯುಕ್ತಾಶ್ರಯದಲ್ಲಿ ೨೧ನೇ ವಾರದ ತರಗತಿಯನ್ನು ಮತ್ತು ಕೃಷಿ ಪರಿಕರ ಮಾರಾಟಗಾರರಿಗೆ ಹಮ್ಮಿಕೊಳ್ಳಲಾಗಿತ್ತು.

ಈ ತರಬೇತಿ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಡಾ. ಸಿದ್ದರಾಜು ಆರ್. ಪ್ರಾಧ್ಯಾಪಕರು ಬೀಜ ವಿಜ್ಞಾನ ತಂತ್ರಜ್ಞಾನ, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಹಾಗೂ ಡಾ. ಪರಶಿವಮೂರ್ತಿ ಪ್ರಾಧ್ಯಾಪಕರು, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಇವರು ಭಾಗವಹಿಸಿದರು.

ಡಾ. ಸಿದ್ದರಾಜು ಆರ್. ಪ್ರಾಧ್ಯಾಪಕರು ಬೀಜ ವಿಜ್ಞಾನ ತಂತ್ರಜ್ಞಾನ, ಬೆಂಗಳೂರು ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಬೀಜೋತ್ಪಾದನೆಯ ತತ್ವಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ನಂತರ ಮಧ್ಯಾಹ್ನದ ತರಗತಿಯನ್ನು ಡಾ. ಪರಶಿವಮೂರ್ತಿ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬೀಜ ವಿಜ್ಞಾನ ವಿಭಾಗ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಬೀಜ ಸಂಗ್ರಹಣೆ ಬಗ್ಗೆ ಮಾಹಿತಿ ನೀಡಿದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು, ಪರಿಕರ ಮಾರಾಟಗಾರರು,ವಿಜ್ಞಾನಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಶ್ರೀಮತಿ ವಿಜೇತ,ದೇಸಿ ಅನುವುಗಾರರು ಇವರು ವಂದನಾರ್ಪಣೆ ಮೂಲಕ ವಂದಿಸಿದರು.